
ಹೆಣ್ಣು ಮಕ್ಕಳು ಚಂಚಲೆಯರು, ಯಾವುದೇ ನಿರ್ಧಾರ ತೆಗೆದುಕೊಳ್ಳಲು ಅಸಮರ್ಥರು ಎಂದು ಹೇಳುವ ಕಾಲ ಎಂದೋ ಕಳೆದುಹೋಗಿದೆ. ಮಹಿಳೆಯರು ಮನಸ್ಸು ಮಾಡಿದರೆ ಏನನ್ನಾದರೂ ಸಾಧಿಸಿಯಾರು ಎಂಬ ಮಾತು ಇಂದಿನ ಕಾಲಕ್ಕೆ ಹೆಚ್ಚು ಪ್ರಸ್ತುತ. ತನಗೆ ಜನ್ಮಕೊಟ್ಟ ಮಾತಾಪಿತೃಗಳನ್ನು ಸುಖವಾಗಿಡೋದು ಪ್ರತಿಯೊಬ್ಬ ಮಕ್ಕಳ ಆದ್ಯ ಕರ್ತವ್ಯ. ಹಾಗೇ ಮಾಡಬೇಕೆಂಬ ದೂರದೃಷ್ಟಿ ಉಷಾಳಿಗೆ ಖಂಡಿತ ಇದೆ. ಹಾಗೆಂದ ಮೇಲೆ ತಾನು ವರಿಸಬೇಕಾದ ಹುಡುಗನ ಬಗ್ಗೆ ಸರಿಯಾಗಿ ತಿಳಿದುಕೊಳ್ಳುವುದು ತನ್ನ ಕರ್ತವ್ಯ ತಾನೇ. ಏನಾದರೂ ವ್ಯತ್ಯಾಸವಾದರೆ ಅದಕ್ಕೆ ಪೋಷಕರನ್ನು ಹಳಿಯುವುದರಲ್ಲಿ ಅರ್ಥವೇ ಇಲ್ಲ.

ಅದಕ್ಕೆಂದೇ ಉಷಾ ಈ ನಿರ್ಧಾರಕ್ಕೆ ಬಂದಿದ್ದಳು. ಕಂಪ್ಯೂಟರ್ ಇಂಜಿನಿಯರಿಂಗ್ ಮುಗಿಸಿ ಉಷಾ ಈಗ ಬೆಂಗಳೂರಿನ ಪ್ರತಿಷ್ಠಿತ ಸಾಫ್ಟ್‌ವೇರ್ ಕಂಪನಿಯಲ್ಲಿ ಕೆಲಸದಲ್ಲಿದ್ದಾಳೆ. ಏಕಮಾತ್ರ ಪುತ್ರಿಯಿಂದ ಮನೆಯ ಆರ್ಥಿಕ ಸ್ಥಿತಿ ಸಾಕಷ್ಟು ಬದಲಾಗಿದೆ. ಅವಳಿಗಾಗಲೇ ಇಪ್ಪತ್ತೆಂಟು ವರ್ಷ ವಯಸ್ಸು. ಬೆಳೆದು ನಿಂತ ಮಗಳಿಗೆ ಮದುವೆ ಮಾಡಿ ಆದಷ್ಟು ಬೇಗ ಜವಾಬ್ದಾರಿ ಕಳೆದುಕೊಳ್ಳೋಣವೆಂಬ ಹಂಬಲ ಪೋಷಕರಿಗೆ. ಉಷಾ ಮಾತ್ರ 'ಅಮ್ಮ.. ನಾನು ಹೇಳುವವರೆಗೂ ಮದುವೆ ಪ್ರಸ್ತಾಪ ಎತ್ತಬೇಡ. ಅದರ ನಿರ್ಧಾರ ನನಗೇ ಬಿಟ್ಟುಬಿಡು' ಕಡ್ಡಿಮುರಿದಂತೆ ಹೇಳಿದ್ದಳು.

ಕಾಳಿಂಗ ಭಟ್ಟರದ್ದು ತೀರ್ಥಹಳ್ಳಿ ಪಕ್ಕ ಒಂದು ಪುಟ್ಟ ಊರು. ಎರಡು ಎಕರೆ ಅಡಿಕೆ ತೋಟ. ಒಂದಷ್ಟು ತೆಂಗು ಬಾಳೆ. ಅದು ಅವರ ಪೂರ್ವಿಕರಿಂದ ಭಟ್ಟರಿಗೆ ಬಂದ ಆಸ್ತಿ. ಪತ್ನಿ ಸರಸ್ವತಿ. ಒಂದು ಗಂಡು ಒಂದು ಹೆಣ್ಣು. ಪುಟ್ಟ ಸಂಸಾರ. ಮಗ ಚಿಕ್ಕ ವಯಸ್ಸಿನಲ್ಲಿ ಏನೋ ಕಾಯಿಲೆ ಬಂದು ತೀರಿಕೊಂಡಿದ್ದಾನೆ.

ಇದೀಗ ಉಷಾಳೇ ದಂಪತಿಗಳಿಗೆ ಸರ್ವಸ್ವ. 'ಅಮ್ಮಾ.. ನಾನು ಮದುವೆ ಮಾಡಿಕೊಂಡರೆ ನಿಮ್ಮನ್ನು ನೋಡಿಕೊಳ್ಳುವವರು ಯಾರು? ಅದಕ್ಕೆ ನಾನು ದೊಡ್ಡವಳಾದ ಮೇಲೆ ಒಳ್ಳೆಯ ಕೆಲಸಕ್ಕೆ ಸೇರಿ ಕೈ ತುಂಬಾ ಸಂಪಾದಿಸಿ ನಿಮ್ಮನ್ನು ಚೆನ್ನಾಗಿ ನೋಡಿಕೊಳ್ಳಬೇಕೆಂ ಬ ಆಸೆ ಇದೆ.

ಅವಳೆಂದುಕೊಂಡಂತೆ ಚೆನ್ನಾಗಿ ಓದಿ ಕೈತುಂಬಾ ಸಂಪಾದಿಸುತ್ತಾಳೆ. ಬೆಂಗಳೂರಿನಲ್ಲಿ ಐ.ಟಿ ಕಂಪನಿಯಲ್ಲಿದ್ದು ವಾರಕ್ಕೊಮ್ಮೆಯೋ ಹದಿನೈದು ದಿನಕ್ಕೊಮ್ಮೆಯೋ ಬಂದು ಹೋಗುತ್ತಾಳೆ. ಬಂದಾಗಲೆಲ್ಲಾ ತಾಯಿ ಕರುಳು ಸುಮ್ಮನಿರುತ್ತದೆಯೇ. 'ನೋಡು ಉಷಾ.. ನಮ್ಮ ಬಗ್ಗೆ ನಿನಗೆ ಚಿಂತೆ ಬೇಡ, ಸುತ್ತಮುತ್ತ ಇರುವವರೆಲ್ಲಾ ನಮ್ಮ ದಾಯಾದಿಗಳೇ. ಹೇಗೋ ದಿನ ಕಳೆದುಹೋಗುತ್ತದೆ. ನಿನ್ನ ಮದುವೆಯದ್ದೇ ನಮಗೀಗ...'



ಕೋಪಗೊಂಡ ಉಷಾ 'ನೋಡಮ್ಮ. ನನ್ನ ಪಾಡಿಗೆ ನನ್ನನ್ನು ಬಿಟ್ಟುಬಿಡಿ. ನಾನು ಎರಡು ದಿನ ಹಾಯಾಗಿರೋಣವೆಂದು ಬಂದಿದ್ದೇನೆ. ನೀವು ಬಂದಾಗೆಲ್ಲಾ ಕಿರಿಕಿರಿ ಮಾಡುತ್ತಿದ್ದರೆ ನಾನು ಬರೋದೇ ನಿಲ್ಲಿಸಿ ಬಿಡುತ್ತೇನೆ' ಒಳಗೆ ಹೋಗಿ ಧಡಾರನೇ ರೂಮಿನ ಬಾಗಿಲು ಜಡಿಯುತ್ತಾ. ಇದು ಅನೇಕ ಬಾರಿ ನಡೆದದ್ದಿದೆ. ಊಟ ಮಾಡದೇ ಮಲಗಿದ ದಿನಗಳಿವೆ. ಆದರೂ ಪೋಷಕರು ಸುಮ್ಮನಿರುತ್ತಾರೆಯೇ. ಮಧ್ಯವರ್ತಿಯೊಬ್ಬನ ಸಹಾಯದಿಂದ ಹತ್ತಾರು ಕಡೆ ನೋಡಿ ಒಳ್ಳೆಯ ಸಂಬಂಧ ಕುದುರಿಯೇ ಬಿಟ್ಟಿತು.

ಹುಡುಗ ಅಮೆರಿಕದ ಡೆಟ್ರಾಯಿಟ್‌ನಲ್ಲಿದ್ದಾನಂತೆ. ಅಲ್ಲಿರುವ ದೊಡ್ಡ ಕಂಪನಿಯಲ್ಲಿ ಮೆಕಾನಿಕಲ್ ಇಂಜಿನಿಯರ್ ಅಂತೆ. ಅಮ್ಮ ಅಪ್ಪ ಮೈಸೂರಿನಲ್ಲಿದ್ದು ಸಾಕಷ್ಟು ಸ್ಥಿತಿವಂತರಂತೆ.. , ಕೇಳುತ್ತಿದ್ದಂತೆ ದಂಪತಿಗಳ ಬಾಯಿ ನೀರೂರಿತ್ತು.

ಅಂದು ಬ್ರೋಕರ್ ಶಾಮಣ್ಣ ಮತ್ತೆ ಬಂದವನೇ ಕಾಳಿಂಗ ಭಟ್ಟರ ಬಳಿ 'ಭಟ್ಟರೇ..ಮುಂದಿನ ತಿಂಗಳು ಅಮೆರಿಕದಿಂದ ಹುಡುಗ ಬರುತ್ತಾನಂತೆ. ಬಂದವನೇ ಹುಡುಗಿ ನೋಡುವ ಶಾಸ್ತ್ರ ಮುಗಿಯಲಿ. ಒಂದು ವೇಳೆ ಇಬ್ಬರಿಗೂ ಒಪ್ಪಿಗೆಯಾದಲ್ಲಿ ಒಳ್ಳೆ ದಿನ ನೋಡಿ ವಾಲಗ ಊದಿದರಾಯ್ತು. ನಿಮಗೂ ವಯಸ್ಸಾಗುತ್ತಾ ಬಂತು. ಕೈಕಾಲು ಗಟ್ಟಿಯಾಗಿದ್ದಾಗ ಜವಾಬ್ದಾರಿ ಮುಗಿಸಿಕೊಳ್ಳುವುದು ಒಳ್ಳೆಯದಲ್ಲವೇ...'

ಸಲಹೆಯೇನೋ ಸೂಕ್ತವಾಗಿದೆ. ಅದನ್ನು ಉಷಾಳಿಗೆ ಒಪ್ಪಿಸುವವರು ಯಾರು.? ಆಗ ಥಟ್ಟನೆ ಭಟ್ಟರಿಗೆ ಹೊಳೆದದ್ದು ಉಷಾಳ ಬಾಲ್ಯ ಗೆಳತಿ ಶಾರದ. ಅವಳಾಗಲೇ ವಿವಾಹವಾಗಿ ಕೈಗೊಂದು ಕೂಸು ಬಂದಾಗಿದೆ. ಶಾರದಳ ಮೊರೆಹೊಕ್ಕರು ಭಟ್ಟರು. 'ನೋಡು ಉಷಾ...ಒಂದು ಹೆಣ್ಣು ಪೂರ್ಣವಾಗಬೇಕಾದರೆ ವಿವಾಹವಾಗಬೇಕು. ಪರಿಪೂರ್ಣಳಾಗಲು ಮಗುವೊಂದನ್ನು ಹಡೆಯಬೇಕು. ಅದು ನಾನು ಕಂಡುಕೊಂಡಂಥ ಸತ್ಯ' ಶಾರದೆಯ ಸಲಹೆಗೆ ಎದುರಾಡಲಿಲ್ಲ ಉಷಾ. ಬಹುಶಃ ಸ್ವಲ್ಪ ಮಟ್ಟಿಗೆ ಒಪ್ಪಿಗೆ ಸಿಕ್ಕಿರಬೇಕು.

ಅಂದು ಹೆಣ್ಣು ನೋಡುವ ಶಾಸ್ತ್ರ ಮುಗಿದಿತ್ತು. ವರ ಹಾಗೂ ಅವನ ಕಡೆಯವರು ಮನಃಪೂರ್ತಿಯಾಗಿ ಒಪ್ಪಿದ್ದರು. ಜಯರಾಮ ಹದಿನೈದು ದಿನ ರಜೆಯ ಮೇಲೆ ಬಂದಿರುವುದರಿಂದ ಲಗ್ನಪತ್ರಿಕೆ ಶಾಸ್ತ್ರ ಪೂರೈಸಿ ಹೊರಟಿದ್ದ. ಉಷಾ ಪೋಷಕರೊಡನೆ ವಿಮಾನ ನಿಲ್ದಾಣದವರೆಗೂ ಬೀಳ್ಕೊಟ್ಟರು. ಉಷಾಳಿಗೆ ನಗುತ್ತಾ ಬಾಯ್ ಹೇಳಿ ಆಲಂಗಿಸಿದ್ದ. ಅವಳಿಗೂ ಹುಡುಗನ ಆಲಿಂಗನ ಹಿತವೆನಿಸಿರಬೇಕು.

ಉಷಾ ಯೋಚಿಸಿದಳು. ಅಂದು ಏನಾಗಿತ್ತು ನನಗೆ. ಅವನ ಬಗ್ಗೆ ಏನೂ ವಿಚಾರಿಸಲಿಲ್ಲವಲ್ಲ. ಹೆಣ್ಣು ನೋಡುವ ಶಾಸ್ತ್ರದ ಬಳಿಕ ಬ್ರೋಕರ್ ಶಾಮಣ್ಣ 'ಹುಡುಗ ಹುಡುಗಿ ಏನಾದರೂ ಮಾತನಾಡೋದಿದ್ದರೆ....' ಸ್ವಲ್ಪ ದೂರ ಹೋಗಿ ಕೆಲಸ, ಓದಿದ್ದು, ತಮಗಿರುವ ಆಸಕ್ತಿ ಇತ್ಯಾದಿಗಳ ಬಗ್ಗೆ ಒಂದಿಷ್ಟು ಹರಟಿ ವಾಪಸಾಗಿ ಇಬ್ಬರೂ ಒಪ್ಪಿಗೆ ಕೊಟ್ಟಿದ್ದೆವು. ಆದರೆ ಎಲ್ಲಾ ವಿಷಯವನ್ನು ನೇರವಾಗಿ ಕೇಳಲಾಗದು. ಆಗಾಗ ಭೇಟಿಯಾಗಿ ಚರ್ಚಿಸೋಣವೆಂದರೆ ಅವನಿರೋದು ಸಪ್ತಸಾಗರದಾಚೆ. ಒಪ್ಪಿಗೆ ಕೊಡೋದಕ್ಕೆ ಇನ್ನಷ್ಟು ಕಾಲಾವಕಾಶ ಕೇಳಬೇಕಾಗಿತ್ತು. ಆತುರ ಮಾಡಿದೆ ಅನ್ನಿಸುತ್ತೆ.

ಅವನಿಗೇನಾದರೂ ಹವ್ಯಾಸಗಳಿವೆಯೋ, ಅಲ್ಲಿ ಯಾರ ಜೊತೆಯಾದರೂ ಅಫೇರ್, ಮದ್ಯ ಮಾಂಸ ಅದೂ ಇದೂ. ಅವರ ಪೋಷಕರು ಇರುವುದು ಮೈಸೂರಿನಲ್ಲಿ. ಅವರಲ್ಲಿ ಇದರ ಬಗ್ಗೆ ಚರ್ಚಿಸಿ ಏನು ಉಪಯೋಗ..? ನಾಲ್ಕಾರು ವರ್ಷಗಳಿಂದ ವಿದೇಶದಲ್ಲಿರುವ ಮಗನ ಬಗ್ಗೆ ಪಾಪ..ಇವರಿಗೇನು ಗೊತ್ತಿರುತ್ತೆ. ಗೊತ್ತಿದ್ದರೂ ಮುಂದೆ ಸರಿ ಹೋಗುತ್ತಾನೆ ಅಂತ ತಿಪ್ಪೆ ಸಾರಿಸಲೂಬಹುದು. ಮುಂದೊಂದು ದಿನ ನಾನು ವಿದೇಶಕ್ಕೆ ಹಾರುತ್ತೇನೆ. ಅಲ್ಲಿ ನನಗೆ ನೌಕರಿ ಸಿಗಬಹುದು ಎಂಬ ಖಾತರಿಯೇನೂ ಇಲ್ಲ. ಈಗ ಕೈತುಂಬಾ ಸಂಬಳ ನೋಡಿ ಆಮೇಲೆ ಪ್ರತಿಯೊಂದು ರೂಪಾಯಿಗೂ ಹಲ್ಕಿರಿಯಬೇಕಲ್ಲ. ಅವನೇನಾದರೂ ಧನಪಿಶಾಚಿಯಾಗಿದ್ದರೆ...ಊರಿಂದ ಹಣ ತಾರೆಂದು ಗೋಗರೆದರೆ..? ಅನೇಕ ಜನ ಹೆಣ್ಣುಮಕ್ಕಳು ಮದುವೆ ಆಗಿ ಅರೇ ತಿಂಗಳಿಗೆ ವಾಪಸಾಗಿದ್ದು ನೋಡಿದ್ದಿದೆ. ಪತ್ರಿಕೆಯಲ್ಲಿ ಕೇಳಿದ್ದಿದೆ. ಉಷಾಳ ಮನಸ್ಸು ಕಡಿವಾಣವಿಲ್ಲದ ಕುದುರೆಯಂತೆ ನರ್ತಿಸತೊಡಗಿತು. ಈ ಮದುವೆಗೆ ಒಪ್ಪಿ ತಪ್ಪು ಮಾಡಿದೆನೇನೋ ಅನ್ನಿಸಿತು. ಇನ್ನೂ ಕಾಲ ಮಿಂಚಿಲ್ಲ. ನಿಶ್ಚಿತಾರ್ಥ ಮಾತ್ರ ತಾನೇ ಆಗಿರೋದು...

ಜಯರಾಮ ಡೆಟ್ರಾಯಿಟ್ ತಲುಪಿದ್ದಾನೆ. ಫೋನ್ ಮಾಡುತ್ತಿರುತ್ತಾನೆ. ಮೆಸೇಜ್, ವಿಡಿಯೋ ಕಾಲ್, ಸ್ಕೈಪ್, ವಾಟ್ಸಾಪ್ ಮೆಸೇಜ್ ನಿರಂತರವಾಗಿ ನಡೆಯುತ್ತಿದೆ. ಅಲ್ಲೀಗ ವಿಪರೀತ ಚಳಿಯಂತೆ. ಮೈನಸ್ ಮೂವತ್ತು ಡಿಗ್ರಿಯ ವರೆಗೂ ಹೋಗುತ್ತದಂತೆ. ನನ್ನ ನೆನಪು ಸದಾ ಬರುತ್ತದಂತೆ. ಎಂಗೇಜ್‌ಮೆಂಟ್, ಮದುವೆ ಒಂದೇ ಸಲ ಆಗಿದ್ದರೆ ಚೆನ್ನಾಗಿತ್ತು ಅನ್ನಿಸುತ್ತದಂತೆ. ಆಗಾಗ ಹರಟುತ್ತಿರುತ್ತಾನೆ. ಇದೆಲ್ಲಾ ಕೇಳುತ್ತಿದ್ದರೆ ಉಷಾಳಿಗೆ ನಗು ಬರುತ್ತದೆ.

ವಿಪರೀತ ಮಾತುಗಾರ. ಅಂಥವರು ಮನಸ್ಸಿನಲ್ಲಿ ಏನೂ ಇಟ್ಟುಕೊಳ್ಳದೇ ಎಲ್ಲವನ್ನೂ ಕಕ್ಕಿ ಬಿಡುವವರೇ ಹೆಚ್ಚು ಅಂತ ಯಾರೋ ಹೇಳಿದ್ದ ನೆನಪು. ಒಳ್ಳೆಯದೇ ಆಯ್ತು ಅಂದುಕೊಂಡ ಉಷಾ ತನ್ನ ಬತ್ತಳಿಕೆಯಲ್ಲಿರುವ ಒಂದೊಂದೇ ಬಾಣಗಳನ್ನು ಬಿಡಲು ಅವಕಾಶಕ್ಕಾಗಿ ಎದುರು ನೋಡುತ್ತಿದ್ದಳು.

ಅದೊಂದು ದಿನ.. ಮಾತನಾಡಬೇಕೆಂದು ಉಷಾ ಫೋನಾಯಿಸಿದಾಗ 'ತಾಳು. ಮನೆಯಿಂದ ಹತ್ತು ಕಿಲೋಮೀಟರ್ ದೂರದ ನೋವಿಯಲ್ಲಿ ವೆಂಕಟರಮಣ ಸ್ವಾಮಿ ದೇವಸ್ಥಾನವಿದೆ. ಅಲ್ಲಿಗೆ ಕಾರಿನಲ್ಲಿ ಹೊರಟಿದ್ದೇನೆ. ಪ್ರತೀ ಶನಿವಾರ ಅಲ್ಲಿಗೆ ಹೋಗುವುದು ವಾಡಿಕೆ. ಇವತ್ತು ಶ್ರಾವಣ ಶನಿವಾರ ಅಲ್ವೆ. ಪೂಜೆ ಮುಗಿಸಿ ಬಂದ ಮೇಲೆ ಫೋನ್ ಮಾಡುತ್ತೇನೆ ಅಂದಿದ್ದ. ಅಬ್ಬ..ವಿದೇಶದಲ್ಲಿದ್ದರೂ ಅದೆಂಥ ದೈವಭಕ್ತಿ!.